SRUJANI
ISSN: 2583-3510
Indian Journal of Innovative Research and Development (SIJIRD)
Volume-1 (02), May-June 2022, Pp. 51-54
Bi-Monthly, Peer-Reviewed, Open Access, Indexed Journal
editor@srujani.in
www.srujani.in

# ಉಪ್ಪಾರ ಸಮುದಾಯದ ವ್ಯಕ್ತಿ ಕೇಂದ್ರಿತ ಸಂಪ್ರದಾಯಗಳು

**ರಾಜೇಶ ಎಂ**[*]

[*] ಸಂಶೋಧಕರು, ಜಾನಪದ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

***Abstract:***

ಸಂಪ್ರದಾಯಗಳು ಜನರ ಮನಸ್ಸಿನಿಂದ ಅವಿರ್ಭವಿಸುವಂತಹವುಗಳಾಗಿವೆ. ಆಯಾ ಸಮಾಜದ ಆಚಾರ–ವಿಚಾರ, ರೀತಿ–ನೀತಿಗಳನ್ನು, ವರ್ತನೆಯನ್ನು, ನಡಾವಳಿಕೆಯ ರೂಪುರೇಷೆಗಳನ್ನು ಸಂಪ್ರದಾಯ ಎನ್ನಲಾಗುತ್ತದೆ. ಇವು ಸಮುದಾಯ ಜೀವನದ ಅವಿಭಾಜ್ಯ ಅಂಗಗಳಾಗಿವೆ. ಪುರಾತನ ಕಾಲದ ಸಾಮಾಜಿಕ ಜೀವನ ಅನೇಕ ಬಗೆಯ ಸಂಪ್ರದಾಯಗಳನ್ನು ರೂಢಿಸಿಕೊಂಡು ಬಂದಿದೆ. ಇವುಗಳು ಆ ಕಾಲಘಟ್ಟದ ಜೀವನ ವಿಧಾನವೆಂಬಂತೆ ಉಳಿದುಕೊಂಡು ಬಂದಿರುವುದರಿಂದ ಅವುಗಳ ಮಹತ್ವವನ್ನು ತೋರಿಸುತ್ತದೆ. ಸಂಪ್ರದಾಯಗಳೆಂದರೆ ತಲೆ ತಲಾಂತರಗಳಿಂದ ಸಾಗಿಬಂದ ನಡವಳಿಕೆಗಳಾಗಿವೆ. ಅಂದರೆ ಪರಂಪರಾಗತ ಜೀವನದಲ್ಲಿ ಮಾನವನ ಚಟುವಟಿಕೆಗಳೇ ಈ ಬಗೆಯ ಧೋರಣೆಗೆ ಎಡೆಮಾಡಿಕೊಟ್ಟಿರುತ್ತವೆ. ಪ್ರಸ್ತುತ ಲೇಖನದಲ್ಲಿ ಉಪ್ಪಾರ ಸಮುದಾಯದ ವ್ಯಕ್ತಿಕೇಂದ್ರಿತ ಸಂಪ್ರದಾಯಗಳನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

***Key Words:*** ಉಪ್ಪಾರ, ನಂಬಿಕೆ, ಆಚರಣೆ, ಸಂಪ್ರದಾಯ.

## ಪೀಠಿಕೆ

ಇಡೀ ಸಮಾಜದ ಅಥವಾ ಒಂದು ನಿರ್ದಿಷ್ಟ ಪ್ರದೇಶದ ಜನತೆಯ ಅಂಗೀಕಾರ ಪಡೆದ ಆಚರಣೆಗಳೇ ಸಂಪ್ರದಾಯಗಳಾಗಿ ಮಾರ್ಪಡುತ್ತವೆ. ಜನರು ಹಿಂದಿನಿಂದಲೂ ಅನುಸರಿಸಿಕೊಂಡು ಬಂದ ರೂಢಿಯೇ ಸಂಪ್ರದಾಯವಾಗಿದೆ. ಸಂಪ್ರದಾಯ ಎಂಬ ಶಬ್ಧಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಆರಾಧನೆ, ವಾಡಿಕೆ, ರೂಢಿ, ಪದ್ಧತಿ, ಆಚಾರ, ಸಂಸ್ಕಾರ, ಮುಂತಾದ ಶಬ್ಧಗಳನ್ನು ಅಲ್ಲಲ್ಲಿ ಬಳಕೆ ಮಾಡಲಾಗಿದೆ. ಯಾವುದೇ ಸಂಪ್ರದಾಯ ಮುಕ್ಕಾಗದಂತೆ ಆಚರಿಸಿಕೊಂಡು ಹೋಗುವಾಗ 'ಹಿರಿಯರು ಮಾಡಿದ್ದು' ಎಂಬ ಶ್ರದ್ಧೆಯ ಜೊತೆಗೆ ಧಾರ್ಮಿಕ ಪ್ರಜ್ಞೆ, ದೈವ ಭಯಗಳೂ ಇಲ್ಲಿ ಕೆಲಸ ಮಾಡುತ್ತವೆ.

## ವ್ಯಕ್ತಿ ಕೇಂದ್ರಿತ ಸಂಪ್ರದಾಯಗಳು

ಅನಾದಿ ಕಾಲದಿಂದ ಆದಿಮಾನವನ ಉಗಮದೊಂದಿಗೆ ಒಂದು ಸಂಸ್ಕೃತಿಯು ಜನ್ಮ ಪಡೆದಿತ್ತು. ಇದು ಅನಾಗರಿಕ ಸಂಸ್ಕೃತಿಯಾಗಿ ರೂಪುಗೊಂಡು ಆಧುನಿಕತೆಯ ಬೆಳವಣಿಗೆಯಾದಂತೆಲ್ಲಾ ಬದಲಾವಣೆ ಹೊಂದಿ ನಾಗರಿಕ ಸಂಸ್ಕೃತಿಯು ಮರುಜನ್ಮ ಪಡೆದು ಹಲವಾರು ನಂಬಿಕೆ, ಸಂಪ್ರದಾಯ, ಆಚರಣೆಗಳನ್ನು ಜಾರಿಗೆ ತಂದಿತು. ಈ ತಳಹದಿಯ ಆಧಾರದ ಮೇಲೆ ಇಂದಿನ ಎಲ್ಲಾ ಸಮುದಾಯಗಳು ತಮ್ಮದೇ ಆದ ಸಾಂಸ್ಕೃತಿಕ ಬದುಕಿನಲ್ಲಿ ಜೀವಿಸುತ್ತಿರುವುದನ್ನು ಸರ್ವೇಸಾಮಾನ್ಯವಾಗಿ ಕಾಣಬಹುದಾದ ಸಂಗತಿಯಾಗಿದೆ. ಇಂತಹ ವ್ಯಕ್ತಿ ಕೇಂದ್ರಿತ ಸಂಪ್ರದಾಯಗಳನ್ನು ಮನುಷ್ಯ ತಾನು ಹುಟ್ಟಿನಿಂದ ಸಾಯುವವರೆಗೂ ತನ್ನದೇ ಆದ ರೀತಿಯಲ್ಲಿ ರೂಪಿಸಿಕೊಂಡಿರುವುದನ್ನು ಕಾಣಬಹುದು.

## ಮುಯ್ಯಿ ಪದ್ಧತಿ

ವ್ಯಕ್ತಿ ಕೇಂದ್ರಿತ ಸಂಪ್ರದಾಯಗಳಲ್ಲಿ ಮುಯ್ಯಿ ಪದ್ಧತಿಯೂ ಕೂಡಾ ಒಂದು. ಮುಯ್ಯಿ ಕೇವಲ ಹಣ, ವಸ್ತು, ಒಡವೆಗಳಷ್ಟೇ ಸೀಮಿತಗೊಂಡದ್ದಲ್ಲ, ವ್ಯಕ್ತಿಗೂ ಸಂಬಂಧಪಡುತ್ತದೆ. ಬಿತ್ತುವಾಗ, ಹೂ ಕುಯ್ಯುವಾಗ, ಕಳೆ ಕೀಳುವಾಗ, ನಾಟಿ ಮಾಡುವಾಗ, ಒಕ್ಕಣೆ ಮಾಡುವಾಗ ಇತ್ಯಾದಿ ಸಂದರ್ಭಗಳಲ್ಲಿ ಆಳಿಗೆ ಪ್ರತಿಯಾಗಿ ಆಳನ್ನು ಮುಯ್ಯಾಗಿ ಪಡೆಯುವ ಪದ್ಧತಿಯು ಉಪ್ಪಾರ

*Please cite this article as:* ರಾಜೇಶ ಎಂ. (2022). ಉಪ್ಪಾರ ಸಮುದಾಯದ ವ್ಯಕ್ತಿ ಕೇಂದ್ರಿತ ಸಂಪ್ರದಾಯಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 1(2), 51–54.

ಸಮುದಾಯದಲ್ಲಿದೆ. ಮುಯ್ಯನ್ನು ತೀರಿಸುವುದು ಒಂದು ಕರ್ತವ್ಯ ಎಂಬ ಪ್ರಶ್ನೆ ಜನಪದರಲ್ಲಿ ಆಳವಾಗಿ ಬೇರೂರಿದೆ.

**ಸಂತಾನಪ್ರಾಪ್ತಿ ಸಂಪ್ರದಾಯಗಳು**

ಆಧುನಿಕ ತಂತ್ರಜ್ಞಾನಎಷ್ಟೇ ಮುಂದುವರೆದರೂ, ಆಸ್ಪತ್ರೆಗಳಿದ್ದರೂ, ವೈದ್ಯರಿದ್ದರೂ ಜನಪದರು ತಮ್ಮ ಸಂಪ್ರದಾಯಗಳನ್ನು ಬಿಡುವುದಿಲ್ಲ. ಅವರ ಆಚಾರ–ಸಂಪ್ರದಾಯಗಳು ಎಲ್ಲೆಲ್ಲೂ ಕಂಡುಬರುತ್ತವೆ.

***ಕೂಸು ಇದ್ದ ಮನೆಗೆ ಬೀಸಣಿಗೆ ಯಾತಕ್ಕ***
***ಕೂಸು ಕಂದಯ್ಯ ಒಳಹೊರಗ ಆಡಿದರೆ***
***ಬೀಸಣಿಗೆ ಗಾಳಿ ಸುಳಿದಾವ.***

ಕುಟುಂಬದ ನೆಮ್ಮದಿಗೆ, ವಂಶೋದ್ಧಾರಕ್ಕೆ ಮಗು ಬೇಕು. ಮಗುವಿನ ಜನನದಿಂದಲೇ ಎಲ್ಲಾ ಸಂಪ್ರದಾಯಗಳು ಉಗಮವಾಗುತ್ತವೆ. ಮಗುವಿಗೆ ಜನ್ಮ ನೀಡಲು ತಂದೆ–ತಾಯಿ ಇಬ್ಬರೂ ಕಾರಣರು. ಹೆಣ್ಣಿನ ತಂದೆ ತಾಯಿಯರು ಮಗಳ ಪರವಾಗಿ ದೇವರಲ್ಲಿ ಹರಕೆ ಕಟ್ಟಿದರೆ, ಆಕೆಯ ಅತ್ತೆ–ಮಾವಂದಿರು ವಂಶಾಭಿವೃದ್ಧಿಗಾಗಿ ಅನೇಕ ದೇವರುಗಳ ಬಳಿ ಮೊರೆ ಹಾಕುತ್ತಾರೆ. ಕಂಡ ಕಂಡ ದೇವರುಗಳಿಗೆಲ್ಲಾ ಕೈ ಮುಗಿಯುತ್ತಾರೆ. ಶಾಸ್ತ್ರ ಕೇಳುವುದು, ಕಣಿ, ಶಕುನ, ಗಿಣಿಶಾಸ್ತ್ರ ಮುಂತಾದವುಗಳನ್ನು ನೋಡುತ್ತಾರೆ. ಹುತ್ತವನ್ನು ಪೂಜಿಸಿ ಮಕ್ಕಳ ಫಲ ಪಡೆದರೆ ಆ ಮಕ್ಕಳಿಗೆ ನಾಗರಾಜ, ನಾಗ, ನಾಗೇಂದ್ರ, ನಾಗರತ್ನ, ನಾಗಮಣಿ ಹೆಸರುಗಳನ್ನು ಇಡುವುದಾಗಿ ಹರಕೆ ಮಾಡಿಕೊಳ್ಳುವುದು. ದೇವರಿಗೆ ಚಿನ್ನ, ಬೆಳ್ಳಿ, ತೊಟ್ಟಿಲು ಮಾಡಿಸುವುದಾಗಿ ಹೀಗೆ ಒಂದಲ್ಲಾ ಎರಡಲ್ಲಾ ಸುಮಾರು ದೇವರಿಗೆ ಹರಕೆ ಮಾಡಿಕೊಳ್ಳುತ್ತಾರೆ. ಇದು ಪ್ರಸ್ತುತದಲ್ಲಿಯೂ ಉಪ್ಪಾರ ಸಮುದಾಯದಲ್ಲಿ ಚಾಲ್ತಿಯಲ್ಲಿರುವುದನ್ನು ಕಾಣಬಹುದಾಗಿದೆ. "ಪುಣ್ಯಕಾರ್ಯಗಳನ್ನು ಮಾಡುವುದರಿಂದ ಮಕ್ಕಳಾಗುತ್ತದೆಂಬ ನಂಬಿಕೆಯಿಂದ ಒಂಬತ್ತು ವಾರ ನಿಷ್ಠೆ ಮತ್ತು ಭಕ್ತಿಯಿಂದ ಸಂತಾನ ಲಕ್ಷ್ಮಿ ಪೂಜೆ ಮಾಡುವುದು, ಅಶ್ವತ್ಥ ಕಟ್ಟೆಗೆ ಪೂಜೆ, ಪ್ರದಕ್ಷಿಣೆ ಮಾಡುವುದು, ಬಡವರ ಮದುವೆ ಮಾಡಿಸುವುದು, ಹರಕೆ ಮಾಡಿಕೊಳ್ಳುವುದು, ತಾಳಿ, ಸೀರೆ, ಕುಪ್ಪಸ ದಾನ ಮಾಡುವುದು, ಹರಿಸೇವೆ ಮಾಡಿಸುವುದು, ಬಾವಿ ತೋಡಿಸುವುದು, ಕೆರೆ ಕಟ್ಟಿಸುವುದು, ದೇವಸ್ಥಾನ, ಅರವಟ್ಟಿಗೆ ನಿರ್ಮಿಸುವುದು ಇತ್ಯಾದಿ"[1]ಜನಪದರಲ್ಲಿ ದಟ್ಟವಾಗಿ ಬೇರು ಬಿಟ್ಟಿದೆ.

**ಆಣೆ ಪ್ರಮಾಣಗಳು**

ಆಣೆ ಪ್ರಮಾಣಗಳಿಗೂ ನಿತ್ಯ ಸತ್ಯ ಧರ್ಮಗಳಿಗೂ ನಿಕಟ ಸಂಬಂಧವಿದೆ. ಗೋವಿನ ಹಾಡಿನಲ್ಲಿ 'ಕೊಟ್ಟ ಭಾಷೆಗೆ ತಪ್ಪಲಾರೆನು ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಎಂದು ಗೋವು ಹುಲಿಗೆ ಹೇಳುವ ಮಾತಿನಲ್ಲಿ ಇದನ್ನು ಗಮನಿಸಬಹುದು. ಕೊಟ್ಟ ಭಾಷೆಗೆ ತಪ್ಪಬೇಡ ಎನ್ನುವಾಗ ವಚನ ಭ್ರಷ್ಟನಾಗಬೇಡ ಎಂದು ಹೇಳುವುದು ರೂಢಿಯಲ್ಲಿದೆ. ಆಣೆ ಪ್ರಮಾಣ ಮಾಡುವಾಗ ಸತ್ಯವನ್ನು ಹೇಳಬೇಕು. ಆದರೆ ಶಿಕ್ಷೆ ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಮಾಡುವುದನ್ನು ನೋಡುತ್ತೇವೆ. ನನ್ನಾಣೆಗೂ, ನಮ್ಮಪ್ಪನಾಣೆಗೂ, ದೇವರಾಣೆಗೂ, ನನ್ನ ತಾಯಿಯಾಣೆಗೂ, ನನ್ನ ಮಕ್ಕಳಾಣೆಗೂ ನಾನು ಕದ್ದಿಲ್ಲ, ನಾನು ಈ ಕೆಲಸ ಮಾಡಿಲ್ಲ' ಎಂದು ಹೇಳುವುದುಂಟು. 'ನಾನು ಪ್ರಮಾಣ ಮಾಡಿ ಹೇಳ್ತಿದಿನಿ' ನಾನು ಕದ್ದಿಲ್ಲ. ನಾನೇನಾದ್ರೂ ಈ ಕೆಲಸ ಮಾಡಿದ್ರೆ ನನ್ನ ವಂಶ ನಿರ್ವಂಶವಾಗಲಿ, ತಿರುದು ತಿಂದು ಹೋಗಲಿ. ನಾನೇನಾದ್ರು ಸುಳ್ಳು ಹೇಳಿದ್ರೆ ನನ್ನ ಮನೆ ಹಾಳಾಗಲಿ ಎಂದು ಶಪಿಸುವುದನ್ನು ಕಾಣುತ್ತೇವೆ.

'ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು' ಎಂಬ ಗಾದೆ ಮಾತು ಜನಪದರಲ್ಲಿ ಚಾಲ್ತಿಯಲ್ಲಿದೆ. ಊರು–ಕೇರಿಗಳಲ್ಲಿ ಯಾರಾದರೂ ತಪ್ಪು ಮಾಡಿದಾಗ ಕರ್ಪೂರ ಹಚ್ಚಿ ತಪ್ಪು ಮಾಡಿಲ್ಲ ಅಂತ ಹೇಳಿ ಬಿಡು ನಾನು ಬಿಟ್ಟು ಬಿಡುತ್ತೇನೆ ಎಂದು ಪ್ರಮಾಣ ಮಾಡಿಸುತ್ತಾರೆ. ಇದಲ್ಲದೆ, ದೇವರ ಫೋಟೋ, ಮಕ್ಕಳು, ಹಸು ಮೊದಲಾದವುಗಳನ್ನು ಮುಟ್ಟಿ ಪ್ರಮಾಣ ಮಾಡುತ್ತಾರೆ. ತಾವು ಸುಳ್ಳು ಹೇಳಿದ್ರೆ ತಮ್ಮ ಮಕ್ಕಳು ಸಾಯಲಿ. ಹಾವು ಕಚ್ಚಿ ಸಾಯಲಿ, ನಾಲಿಗೆ ಕಳಚಿ ಬೀಳಲಿ ಎಂದು ಕೆಲವರು ಎದೆ ಮುಟ್ಟಿ ಪ್ರಮಾಣ ಮಾಡುತ್ತಾರೆ. ಕ್ಷುದ್ರ ದೇವತೆಗಳು, ಮನೆ ದೇವರುಗಳ ಮೇಲೆ ಆಣೆ ಇಟ್ಟು ಪ್ರಮಾಣ ಮಾಡುವುದುಂಟು.

**ಅರಳೀಮರದ ಪೂಜೆ**

ಅರಳೀಮರವನ್ನು ಅಶ್ವತ್ಥಮರವೆಂದು ಕರೆಯುತ್ತಾರೆ. ವಿಷ್ಣುವಿನ ಅವತಾರವೆಂದು ಭಾವಿಸಿರುವ ಜನಪದರು ಈ ಮರದ ಎಲೆಗಳ ಮೇಲೆ ವಿಷ್ಣುವೇ ಕುಳಿತಿರುವಂತೆ ಚಿತ್ರಿತವಾಗಿರುವುದನ್ನು ಗುರುತಿಸುತ್ತಾರೆ. ಆದುದರಿಂದ ಅರಳೀಮರವನ್ನು ಯಾರೂ ಕಡಿಯಬಾರದೆಂದು ನಿಷೇಧಿಸಲಾಗಿದೆ. ಈ ಮರವನ್ನು ಕಡಿದವರ ವಂಶ ನಿರ್ವಂಶವಾಗುತ್ತದೆಂದು ನಂಬುತ್ತಾರೆ. ಮದುವೆಯಾಗದೆ ಸಾಯುವ ಬ್ರಾಹ್ಮಣರ ಆತ್ಮವು ಈ ಮರದಲ್ಲಿ ಸೇರುತ್ತವೆಂದು ನಂಬಿರುವುದರಿಂದಲೇ ಇರಬೇಕು. ಅರಳೀಮರ "ಮಕ್ಕಳಾಗದ ಬಂಜೆ ಹೆಂಗಸರಿಗೆ ಮಕ್ಕಳನ್ನು ಕೊಡುವ ಶಕ್ತಿ ಪಡೆದಿದೆಯೆಂಬುದಾಗಿ ಹೇಳುವುದು. ಮದುವೆಯಾಗಿ ಮಕ್ಕಳಾಗದ ಹೆಂಗಳೆಯರು ಸೋಮವಾರ, ಶುಕ್ರವಾರದಂದು 5 ವಾರಗಳ ಕಾಲ ಮುಂಜಾನೆ ಸೂರ್ಯ ಮೂಡುವುದರೊಳಗಾಗಿ ವ್ರತವಿದ್ದು ವಿಶೇಷ ಪೂಜೆ ಸಲ್ಲಿಸುತ್ತಾರೆ. ಮುಂಜಾನೆ ಎದ್ದು ತಣ್ಣೀರಿನ ಸ್ನಾನ ಮಾಡಿ ಪೂಜೆ ಸಾಮಗ್ರಿಗಳನ್ನು ತೆಗೆದುಕೊಂಡು ಮರದ ಸುತ್ತಲೂ

[1] ಅರವಿಂದ ಮಾಲಗತ್ತಿ, ಜಾನಪದ ವಿಶ್ವಕೋಶ, ಪು.112

ಸಗಣಿ ನೀರು ಚಿಮುಕಿಸಿ ಮರದ ಪೂರ್ವದಿಕ್ಕಿಗೆ ವಿಭೂತಿ, ಅರಿಶಿಣ, ಕುಂಕುಮ ಹಚ್ಚಿ ಹೂವು ಮುಡಿಸಿ ಎಲೆ-ಅಡಿಕೆ-ಹಣ್ಣು ಮುರಿದು, ಕಾಯಿ ಒಡೆದು ಮರದ ಸುತ್ತಲೂ ತೀರ್ಥ ಪ್ರೋಕ್ಷಣೆ ಮಾಡಿ ಊದುಗಡ್ಡಿಯಿಂದ ಪೂಜೆ ಸಲ್ಲಿಸಿ ಕರ್ಪೂರದಿಂದ ಮಂಗಳಾರತಿ ಬೆಳಗಿ ದೀರ್ಘ ದಂಡ ನಮಸ್ಕಾರದೊಂದಿಗೆ ಸಂತಾನಪ್ರಾಪ್ತಿಯನ್ನು ನೀಡುವಂತೆ ಬೇಡಿಕೊಳ್ಳುತ್ತಾರೆ. ಅನಂತರ ಎಲೆ, ಅಡಿಕೆ, ಕಾಣಿಕೆಯನ್ನು ಅಲ್ಲೇ ಬಿಟ್ಟು ಮನೆಗೆ ಬರುತ್ತಾರೆ. ಫಲವಂತಿಕೆಯನ್ನು ಪಡೆಯಲು ಕೆಲವು ಬಂಜೆ ಹೆಂಗಸರು ಅರೆನಗ್ನರಾಗಿ ಅರಳೀಮರದ ಸುತ್ತಲೂ ನಿರ್ದಿಷ್ಟ ಸಂಖ್ಯೆಯಲ್ಲಿ ಪ್ರದಕ್ಷಿಣೆ ಹಾಕುವುದೂ ಉಂಟು. ಏಕೆಂದರೆ ಅರಳೀಮರ ಗಂಡಸಿನ ಸೃಷ್ಟಿಶಕ್ತಿಯನ್ನು ಹೊಂದಿದೆಯೆಂದು ನಂಬಿದ್ದಾರೆ."[2] ಅರಳೀಮರ ತ್ರಿಮೂರ್ತಿಗಳ ವಾಸಸ್ಥಾನವೆಂದು ನಂಬಿ ಮದುವೆಯಾಗದ ಕನ್ಯೆಗೆ ಕಂಕಣಬಲ ಕೂಡಿಬರಲೆಂದು ಈ ಮರಕ್ಕೆ ಧಾರೆ ಎರೆದುಕೊಡುವ ಪದ್ಧತಿ ಹಿಂದೆ ರೂಢಿಯಲ್ಲಿತ್ತೆಂದು ಹೇಳುತ್ತಾರೆ.

**ಬಿಲ್ವಪತ್ರ ಮರದ ಪೂಜೆ:**

ಇದು ಪ್ರಾಚೀನ ಕಾಲದಿಂದಲೂ ಶೈವರಿಗೆ ಪವಿತ್ರವಾದ ಮರವಾಗಿದೆ. ಮರದಲ್ಲಿರುವ ಪ್ರತಿಯೊಂದು ಎಲೆಗಳ ಗುಂಪು ಮೂರು ಮೂರು ದಳಗಳನ್ನು ಹೊಂದಿರುವುದರಿಂದ ಇದನ್ನು ಶಿವನ ಮೂರು ಕಣ್ಣುಗಳಿಗೆ ಹೋಲಿಕೆ ಮಾಡಿ ಮುಕ್ಕಣ್ಣನ ಸಂಕೇತವೆಂದು ಹಾಗೂ ಸೃಷ್ಠಿ, ಸ್ಥಿತಿ, ಲಯಗಳ ಸಮೀಕರಣವೆಂದು ಭಾವಿಸುತ್ತಾರೆ. ಶಿವನೊಂದಿಗೆ ಸಮೀಕರಣಗೊಂಡಿರುವ ಈ ಮರವನ್ನು ಮನೆಯ ಮುಂದೆ ಮಾತ್ರ ಬೆಳೆಸುತ್ತಾರೆ. ಇದು ದೇವತೆಗಳ ವಾಸಸ್ಥಾನವಾಗಿರುವುದರಿಂದ ಉರುವಲಿಗಾಗಿ ಕಡಿಯುವುದಿಲ್ಲ. ಬಿಲ್ವಪತ್ರೆ ಮರವನ್ನು ಪುರುಷ ಸ್ತ್ರೀಯರೆನ್ನದೆ ಕಷ್ಟ-ನಷ್ಟಗಳ ಪರಿಹಾರಕ್ಕಾಗಿ ಎಲ್ಲರೂ ವಿಶೇಷವಾಗಿ ಪೂಜಿಸುತ್ತಾರೆ. ಹಾಗೆಯೇ ಶಿವನಿಗೆ ಸಾವಿರ, ಲಕ್ಷ ಬಿಲ್ವಾರ್ಚನೆಯನ್ನು ಮಾಡಿಸುತ್ತಾರೆ. ಸತ್ತ ವ್ಯಕ್ತಿಗಳ ಸಮಾಧಿಯ ಮೇಲೆ ಒಂದೊಂದು ಬಿಲ್ವಪತ್ರೆಯನ್ನು ಹಾಕುವುದು ಉಪ್ಪಾರರಲ್ಲಿ ಕಂಡುಬರುತ್ತದೆ. ಏಕೆಂದರೆ ಹೀಗೆ ಮಾಡುವುದರಿಂದ ನಿಧನರಾದವರು ಕೈಲಾಸವಾಸಿಯಾಗುತ್ತಾರೆಂದು ನಂಬುತ್ತಾರೆ. "ಬಿಲ್ವಪತ್ರದಿಂದ ತಯಾರಿಸಿದ ಅಂತ್ರ, ತಾಯಿತಗಳನ್ನು ಗರ್ಭಿಣಿ ಸ್ತ್ರೀಯರಿಗೆ ಕಟ್ಟಿದರೆ ಹೆರಿಗೆ ಸಂಬಂಧದ ತೊಂದರೆಗಳು ನಿವಾರಣೆಯಾಗುತ್ತದೆಂದು ಹೇಳುತ್ತಾರೆ."[3] ಇದರ ಅಂತ್ರ ಕಟ್ಟಿಸಿಕೊಂಡವರು ಯಾವುದೇ ದುಷ್ಟಶಕ್ತಿಗಳಿಗೆ ಹೆದರುವ ಅಗತ್ಯವಿರುವುದಿಲ್ಲ. ಅಂತಹವರಿಗೆ ಸದಾಕಾಲ ಆಯುರಾರೋಗ್ಯ ಭಾಗ್ಯಗಳು ಲಭಿಸುತ್ತದೆ ನಂಬಿಕೆಯಿದೆ.

**ಬನ್ನಿಮರದ ಪೂಜೆ**

ಬನ್ನಿಮರವನ್ನು ಮಹಾಕಾಳಿಯ ಅವತಾರವೆಂದು ಪರಿಗಣಿಸುತ್ತಾರೆ. ಮಕ್ಕಳ ಫಲ ನೀಡುವ ಶಕ್ತಿ ಈ ಮಹಾಕಾಳಿಗಿದೆ. ಫಲ ಬೇಡುವ ಹೆಣ್ಣುಮಕ್ಕಳು ಅನೇಕ ವಾರಗಳವರೆಗೆ ನಿಯಮಬದ್ಧ ಪೂಜೆ, ಪುನಸ್ಕಾರ ಮಾಡುತ್ತಾರೆ. ಕೆಲವು ಭಕ್ತರು ತಾವು ಉಡಲು ತಂದ ಹೊಸ ಬಟ್ಟೆಯನ್ನು ಈ ದೇವತಾ ಮರಕ್ಕೆ ಮುಟ್ಟಿಸಿ ಪೂಜಿಸಿ ಅನಂತರ ತೊಡುವ ಸಂಪ್ರದಾಯವಿದೆ. ಈ ಮರವನ್ನೂ ಕೂಡ ಉಪ್ಪಾರ ಸಮುದಾಯದವರು ಪವಿತ್ರ ಭಾವನೆಯಿಂದ ಪೂಜಿಸುವುದನ್ನು ಕಾಣುತ್ತೇವೆ.

**ಎಕ್ಕೆಗಿಡದ ಪೂಜೆ**

ಎಕ್ಕೆಗಿಡವನ್ನು ಗಣೇಶನ ಸಂಕೇತವೆಂದು, ಸೂರ್ಯನ ವಾಸಸ್ಥಾನವೆಂದು ಪರಿಭಾವಿಸಿ ಪೂಜಿಸಲಾಗುತ್ತದೆ. ಈ ಗಿಡದಲ್ಲಿ ಬಿಳಿ ಮತ್ತು ಕೆಂಪು ಎಕ್ಕೆಗಳೆಂಬ ಎರಡು ಬಗೆಗಳಿವೆ. ಇದರಲ್ಲಿ ಬಿಳಿ ಎಕ್ಕೆ ಶ್ರೇಷ್ಠ. ಇದು ಮನೆಯ ಮುಂದೆ ಬೆಳೆದರೆ ಅದನ್ನು ವಿಘ್ನ ವಿನಾಶಕವೆಂದು ತಿಳಿದು ಪ್ರತಿದಿವಸ ಬೆಳಿಗ್ಗೆ ಸ್ತ್ರೀಯರು ದೀಪ ಬೆಳಗಿಸಿ ಪೂಜಿಸುತ್ತಾರೆ. ಶಿವರಾತ್ರಿಯ ದಿವಸದಂದು ಶಿವನು ಎಕ್ಕೆಗಿಡದ ಕೆಳಗೆ ವಾಸಿಸುತ್ತಾನೆಂಬ ನಂಬಿಕೆಯಿದೆ.

**ತುಳಸಿ ಗಿಡದ ಪೂಜೆ**

ತುಳಸಿ ಗಿಡವನ್ನು ಇತ್ತೀಚಿನ ದಿನಗಳಲ್ಲಿ ಮನೆ ಮನೆಗಳಲ್ಲಿಯೂ ವಿಶಿಷ್ಟ ವಿನ್ಯಾಸದ ಕಟ್ಟೆ ಕಟ್ಟಿ ಬೆಳೆಸಿಕೊಂಡು ಪ್ರತಿದಿನ ಮುಂಜಾನೆ ಮನೆಯಂಗಳದ ಕಸ ಗುಡಿಸಿ ನೀರು ಹಾಕಿ, ರಂಗೋಲಿ ಬಿಟ್ಟು ಸ್ನಾನ ಮಡಿಯುಟ್ಟು ಹೆಣ್ಣುಮಕ್ಕಳು ಪೂಜಿಸುತ್ತಾರೆ. ತುಳಸಿಯಿಂದ ತಯಾರಿಸಿದ ಹಾರವನ್ನು ದೇವತೆಗಳಿಗೆ ಹಾಕುತ್ತಾರೆ. ಇದರ ಹಾರ ಶನೇಶ್ವರ ದೇವರಿಗೆ ಪ್ರಿಯವಾದ ಅರ್ಪಣೆಯಾಗಿದ್ದು, ಉಪ್ಪಾರರಲ್ಲಿ ತುಳಸಿ ಗಿಡದ ಪೂಜೆ ಸಾಮಾನ್ಯವಾಗಿದೆ.

**ನಾಗರಪಂಚಮಿ**

ಶುಕ್ಲ ಪಕ್ಷದ ಶ್ರಾವಣಮಾಸದ ತಿಂಗಳ 5ನೇ ದಿನದಂದು ನಾಗರಪಂಚಮಿ ಹಬ್ಬವನ್ನು ಭಕ್ತಿಭಾವದಿಂದ ಆಚರಿಸಲಾಗುತ್ತದೆ. ಎಲ್ಲೆಲ್ಲಿ ನಾಗರ ಕಲ್ಲುಗಳಿವೆಯೋ ಅಲ್ಲೆಲ್ಲ ಉಪ್ಪಾರ ಮಹಿಳೆಯರು ಕುಟುಂಬ ಸಮೇತ ಹೋಗಿ ತನಿ ಎರೆದು ನಾಗದೇವರಿಗೆ ಭಕ್ತಿಯನ್ನು ಸಮರ್ಪಿಸುವರು. ಹುತ್ತಕ್ಕೆ ವಿಶೇಷವಾಗಿ ಪೂಜೆ ಸಲ್ಲಿಸಿ, ಹಣ್ಣು ಹಂಪಲು ಇಟ್ಟು, ಹಸುವಿನ ಹಾಲು, ತುಪ್ಪದಿಂದ ತನಿ ಎರೆಯುವರು. ಹುರಿದ ಅರಳು, ಭತ್ತದ ತೆನೆ ಮತ್ತು ಗರಿಕೆಯನ್ನು ಅರ್ಪಿಸಿ ಆರಾಧಿಸುತ್ತಾರೆ. ನಾಗದೇವತೆ ಅಥವಾ ನಾಗರಕಲ್ಲು

[2]ವಕ್ತೃ: ಸಣ್ಣಮ್ಮ, ವಯಸ್ಸು-60, ಕೂಲಿ, ಹೊಸಕೋಟೆ ಮೋಳೆ.
[3]ವಕ್ತೃ: ಮಹದೇವಮ್ಮ, ವಯಸ್ಸು-65, ಕೂಲಿ, ಬಿಳುಗಲಿ.

ಆರಾಧಿಸುವುದರಿಂದ ಬಡತನ ದೂರವಾಗುತ್ತದೆಂಬ ನಂಬಿಕೆ ಉಪ್ಪಾರರಲ್ಲಿದೆ. ಅವಿವಾಹಿತ ಮಹಿಳೆಯರು ನಾಗರಕಲ್ಲಿಗೆ ಹಾಲೆರೆಯುವುದು, ಪೂಜೆ ಸಲ್ಲಿಸುವುದರಿಂದ ಉತ್ತಮ ವರ ದೊರೆಯುತ್ತಾನೆ, ಮನಸ್ಸಿನ ಇಷ್ಟಾರ್ಥಗಳು ಈಡೇರುತ್ತವೆ ಎಂಬ ನಂಬಿಕೆಯಿದೆ. ಹೀಗಾಗಿ ನಾಗದೇವರ ಆಶೀರ್ವಾದ ಪಡೆಯಲು ಈ ಹಬ್ಬವನ್ನು ಮಡಿಯುಟ್ಟು ಭಕ್ತಿಯಿಂದ ಉಪ್ಪಾರರು ಆಚರಿಸುತ್ತಾರೆ."[4]

**ಭೀಮನ ಅಮಾವಾಸ್ಯೆ**

ಭಾರತೀಯ ಸಂಸ್ಕೃತಿಯಲ್ಲಿ ಪತಿಯೆ ಪರಮದೈವ ಎಂದು ಪೂಜಿಸುವ ಸಂಪ್ರದಾಯ ಬಹಳ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ಹೆಣ್ಣಿಗೆ ಮುತ್ತೈದೆ ಭಾಗ್ಯ ನೀಡುವ ಪತಿಯ ಆರೋಗ್ಯ ವೃದ್ಧಿಯಾಗಬೇಕು, ಆತನಿಗೆ ಎಲ್ಲಾ ಕ್ಷೇತ್ರದಲ್ಲೂ ಯಶಸ್ಸು ದೊರೆಯಬೇಕೆಂದು ಹೆಂಡತಿಯು ಸಾಕಷ್ಟು ರೀತಿಯ ವ್ರತಗಳನ್ನು ಕೈಗೊಳ್ಳುತ್ತಾಳೆ. ಅಂತಹ ವ್ರತಗಳಲ್ಲಿ ಭೀಮನ ಅಮಾವಾಸ್ಯೆ ಕೂಡ ಅತಿ ಮುಖ್ಯವಾದುದಾಗಿದೆ. ಭೀಮನ ಅಮಾವಾಸ್ಯೆ ಎಂದರೆ ಹಿಂದೂ ಮಹಿಳೆಯರ ಪಾಲಿಗೆ ಅತ್ಯಂತ ಪವಿತ್ರವಾದ ಹಬ್ಬವಾಗಿದೆ. ದಕ್ಷಿಣ ಕನ್ನಡದಲ್ಲಿ ಆಟಿ ಅಮಾವಾಸ್ಯೆ, ಉತ್ತರ ಕನ್ನಡದಲ್ಲಿ ಕೊಡೆ ಅಮಾವಾಸ್ಯೆ, ಅಳಿಯನ ಅಮಾವಾಸ್ಯೆ, ಕಾರವಾರದಲ್ಲಿ ಗಟಾರದ ಅಮಾವಾಸ್ಯೆ ಎಂದು ಕರೆಯುತ್ತಾರೆ.

"ಶಿವನು ಭೀಮನ ಅಮಾವಾಸ್ಯೆಯಂದು ಪಾರ್ವತಿ ದೇವಿಯನ್ನು ವಿವಾಹವಾಗುತ್ತಾನೆ. ಆದ್ದರಿಂದ ಈ ದಿನವನ್ನು ಭೀಮನ ಅಮಾವಾಸ್ಯೆಯೆಂದು ಆಚರಿಸಲಾಗುತ್ತದೆ. ಈ ದಿನದಂದು ಮಹಿಳೆಯರು ಶಿವ–ಪಾರ್ವತಿಯನ್ನು ಆರಾಧಿಸಿದರೆ ಸಮೃದ್ಧಿ, ಸಂತಾನ, ಪತಿವ್ರತೆ, ಆಯಸ್ಸು, ಯಶಸ್ಸು, ಸಂತೋಷ ಸೇರಿದಂತೆ ಎಲ್ಲವನ್ನು ನಮಗೆ ಕರುಣಿಸುತ್ತಾರೆಂಬ ನಂಬಿಕೆ ಮತ್ತು ಕೈಗೆ ಕಂಕಣ ಕಟ್ಟಿಕೊಂಡು ವ್ರತ ಮಾಡಿದರೆ ಪತಿಗೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಉಪ್ಪಾರ ಮಹಿಳೆಯರಲ್ಲಿದೆ."[5]

ಈ ದಿನದಂದು ಮಹಿಳೆಯರು ಆಹಾರ ಸೇವಿಸುವುದನ್ನು ತಪ್ಪಿಸಿ ರಾಹುಕಾಲವನ್ನು ಹೊರತುಪಡಿಸಿ ಬೆಳಿಗ್ಗೆ ಅಥವಾ ಸಂಜೆ ಯಾವುದೇ ಶುಭ ಮುಹೂರ್ತದಲ್ಲಿ ಶಿವನಿಗೆ ಪ್ರಾರ್ಥನೆಯನ್ನು ಸಲ್ಲಿಸಿದರೆ ಪಾರ್ವತಿಯು ಅವಿವಾಹಿತ ಮಹಿಳೆಯರಿಗೆ ಸದ್ಗುಣಯುತ ಗಂಡನನ್ನು ನೀಡುತ್ತಾಳೆ. ಒಮ್ಮೆ ಈ ವ್ರತ ಕೈಕೊಂಡರೆ ಐದು, ಒಂಭತ್ತು ಅಥವಾ ಹದಿನಾರು ವರ್ಷ ಸಂಪೂರ್ಣಗೊಳಿಸಿ ಉದ್ಯಾಪನೆ ಮಾಡಿ ಎಲ್ಲರಿಗೂ ಸಿಹಿಯೂಟ ಹಾಕಿಸಬೇಕು ಎಂಬ ಸಂಪ್ರದಾಯವಿದೆ. ಆಷಾಡದಲ್ಲಿ ಮಡದಿಯ ಸಂಗ ತೊರೆದು ತವರಿನ ಗೂಡು ಸೇರಿಕೊಂಡಿದ್ದ ಹೆಂಗೆಳೆಯರು ಗಂಡನ ಪಾದಕ್ಕೆರಗಿ ಮತ್ತೆ ಜೀವನದ ಬಂಡಿ ಹೂಡುವ ಸಂಪ್ರದಾಯವಿದೆ.

ಒಂದು ತಟ್ಟೆಯಲ್ಲಿ ಪೂಜಾ ಸಾಮಾಗ್ರಿಗಳನ್ನಿಟ್ಟು ಜೊತೆಗೆ ಒಂಭತ್ತು ಗಂಟಿನ ಗೌರಿದಾರವನ್ನಿಟ್ಟು ಸಂಕಲ್ಪದಿಂದ ಮೊದಲು ಗಣಪತಿ ಪೂಜೆ ಮಾಡಿ ನಂತರ ಭೀಮೇಶ್ವರನ ಪೂಜೆ ಮಾಡಿ ಆ ದಾರವನ್ನು ಕೈಗೆ ಕಟ್ಟಿಕೊಳ್ಳಬೇಕು. ನಂತರ ಗಂಡನ ಪಾದಪೂಜೆ ಮಾಡಿ, ಪತಿಯ ಕಾಲಿಗೆ ಬಿದ್ದು ಆಶೀರ್ವಾದವನ್ನು ಪಡೆದುಕೊಳ್ಳಬೇಕು ಎಂಬ ಸಂಪ್ರದಾಯ ಉಪ್ಪಾರ ಸಮುದಾಯದ ಮಹಿಳೆಯರಲ್ಲಿದೆ.

**ಉಪಸಂಹಾರ**

ಒಂದು ಸಮಾಜದ ಅಥವಾ ನಿರ್ದಿಷ್ಟ ಪ್ರದೇಶದ ಜನತೆಯ ಅಂಗೀಕಾರ ಪಡೆದ ಆಚರಣೆಗಳೇ ಸಂಪ್ರದಾಯಗಳಾಗಿ ಮಾರ್ಪಡುತ್ತವೆ. ಈ ಸಂಪ್ರದಾಯಗಳು ಪ್ರದೇಶದಿಂದ ಪ್ರದೇಶಕ್ಕೆ, ವರ್ಗದಿಂದ ವರ್ಗಕ್ಕೆ ಭಿನ್ನವಾಗಿರುತ್ತವೆ. ಒಬ್ಬ ವ್ಯಕ್ತಿಯ ಹುಟ್ಟಿನಿಂದ ಸಾವಿನವರೆಗೆ ಒಂದಲ್ಲ ಒಂದು ರೀತಿಯಲ್ಲಿ ಸಂಪ್ರದಾಯದ ಆಚರಣೆ ಜರುಗುವುದನ್ನು ಕಾಣುತ್ತೇವೆ. ಹುಟ್ಟು, ನಾಮಕರಣ, ಸೀಮಂತ, ಅಂತ್ಯಸಂಸ್ಕಾರ ಹೀಗೆ ಹಲವಾರು ರೀತಿಯಲ್ಲಿ ನಡೆಯುತ್ತದೆ. ದುಷ್ಟಚಿಂತನೆ, ದುಷ್ಟಟದಿಂದ ಬಹುದೂರವಿರಲು ಸಂಪ್ರದಾಯಗಳು ಉಪಯೋಗವಾಗುತ್ತವೆ.

**ಪರಾಮರ್ಶನ ಗ್ರಂಥಗಳು**


- ಅರವಿಂದ ಮಾಲಗತ್ತಿ. (2006). *ಕನ್ನಡ ವಿಷಯ ವಿಶ್ವಕೋಶ ಜಾನಪದ.* ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.
- ಜವರೇಗೌಡ ದೇ. (1991). *ಜಾನಪದ ಅಧ್ಯಯನ.* ಚೇತನ ಬುಕ್ ಹೌಸ್.
- ಮೋಹನ್ ಎಸ್. (2010). *ನಾಗಾರಾಧನೆ ಪರಂಪರೆ ಸ್ಥಿತ್ಯಂತರಗಳು,* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಚಲುವೇಗೌಡ ತ ಚಿ. (1978). *ಕೆಲವು ಜಾನಪದ ಸಂಪ್ರದಾಯಗಳು.* ತಳಗವಾಡಿ ಪ್ರಕಾಶನ.
- ದಾಸೇಗೌಡ ಜಿ ವಿ.(2007). *ನಮ್ಮ ಜನಪದ ನಂಬಿಕೆಗಳು.* ಚೇತನ ಬುಕ್ ಹೌಸ್.
- ಶಂಕರನಾರಾಯಣ ತೀ ನಂ. (1982). *ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು.* ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.


[4]. ವಕ್ತೃ: ಚಿನ್ನಮ್ಮ, ವಯಸ್ಸು–54, ಗೃಹಿಣಿ, ಹದಿನಾರು ಮೋಳೆ.
[5]. ವಕ್ತೃ: ಸಿದ್ದಮ್ಮ, ವಯಸ್ಸು–52, ಗೃಹಿಣಿ, ಹುಣಸನಾಳು.